ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಪೀಠವನ್ನು ಧಾರವಾಡದಲ್ಲಿ ಸ್ಥಾಪಿಸುವುದರ ಬಗ್ಗೆ

೪೫೯ (೬೮೧) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಪೀಠವನ್ನು ಧಾರವಾಡದಲ್ಲಿ ಸ್ಥಾಪಿಸಲು ಸಾರ್ವಜನಿಕರ ನ್ಯಾಯ ಸಮ್ಮತ ಆಗ್ರಹವಿರುವುದನ್ನು ಸರ್ಕಾರ ಗಮನಿಸಿದೆಯೇ ?

ಆ) ಆ ಬಗ್ಗೆ ಈವರೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ಮತ್ತು ಸರ್ಕಾರದ ನೀತಿ ಏನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಕೇಂದ್ರ ಸರ್ಕಾರವು ಸಲಹೆ ಮಾಡಿರುವಂತೆ ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಸಹಮತಿಯನ್ನು ಕೋರಲಾಗಿದೆ. ಉಚ್ಚ ನ್ಯಾಯಾಲಯವು ಸದರಿ ವಿಷಯವನ್ನು ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಮುಂದಿರಿಸಿ ನಿರ್ಣಯವನ್ನು ಸರ್ಕಾರಕ್ಕೆ ತಿಳಿಸುವುದಾಗಿ ತಿಳಿಸಿರುತ್ತಾರೆ. ಪೂರ್ಣ ಪೀಠ ನಿರ್ಣಯವನ್ನು ನಿರೀಕ್ಷಿಸಲಾಗಿದೆ.

ಬೆಂಗಳೂರು ನಗರದಲ್ಲಿರುವ ಏಕಮುಖ ರಸ್ತೆಗಳ ವಿವರ

೪೪೦ (೭೨೯) ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).—ಮಾನ್ಯ ಗೃಹ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ನಗರದಲ್ಲಿ ಯಾವ ಯಾವ ರಸ್ತೆಗಳನ್ನು ಏಕಮುಖ ಸಂಚಾರಕ್ಕೆ ಒಳಪಡಿಸಲಾಗಿದೆ ?

ಆ) ಈ ಬಗ್ಗೆ ಸಾರ್ವಜನಿಕರ ಪ್ರತಿಕ್ರಿಯೆಯನ್ನು ಸರ್ಕಾರ ಗಮನಿಸಿದೆಯೇ ?

ಶ್ರೀ ರಮಾನಾಥ್ ರೈ (ಗೃಹ ರಾಜ್ಯ ಸಚಿವರು);—

ಅ) ೧) ಜೆ. ಸಿ. ರಸ್ತೆ.
೨) ಕೆಂಪೇಗೌಡರಸ್ತೆ
೩) ಶೇಷಾದ್ರಿರಸ್ತೆ,
೪) ಪ್ಲಾಟ್‌ಫಾರಂರಸ್ತೆ.
೫) ಸಂಪಿಗೆರಸ್ತೆ
೬) ಶೇಷಾದ್ರಿಪುರಂ ಮೊದಲನೆಯ ರಸ್ತೆ ಮತ್ತು
೭) ಪ್ಯಾಲೆಸ್ ರಸ್ತೆಯ ಕೆಲಭಾಗಗಳಲ್ಲಿ ಏಕಮುಖ ಸಂಚಾರಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ

ಆ) ಹೌದು.

೧೯೯೦ರ ಮತೀಯ ಗಲಭೆಯಲ್ಲಿ ಕಾಣೆಯಾದವರಿಗೆ ಪರಿಹಾರ ನೀಡಿಕೆ

೪೪೨ (೭೭೬) ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ). —ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಚನ್ನಪಟ್ಟಣದಲ್ಲಿ ನಡೆದ ಮತೀಯ ಗಲಭೆಯಲ್ಲಿ ಕಾಣೆಯಾದವರ ಹೆಸರಿನಲ್ಲಿ ಪರಿಹಾರದ ಮೊಬಲಗನ್ನು ಠೇವಣಿ ಇಡುವ ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿ ಇದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರದಿಂದ ಈ ದಿಸೆಯಲ್ಲಿ ತೆಗೆದುಕೊಂಡ ಕ್ರಮವೇನು ?

ಇ) ಈ ಪ್ರಕರಣಗಳಲ್ಲಿ ಕುಟುಂಬದವರಿಗೆ ನೀಡಲಾದ ಪರಿಹಾರವೇನು ?